# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

**ದಿನಾಂಕಃ 28.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರಿಂದಃ**

**1.** ನನ್ನ ಹೆಸರು ನಾಗೇಶ್. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಮ್ಮ ವಕೀಲರಿಗೆ ದಾವೆ ಹಾಕಲು ನಾನೆ ಮಾಹಿತಿ ಕೊಟ್ಟಿದ್ದೇನೆ. ಮುನಿಯಪ್ಪನಿಗೆ 4 ಜನ ಮಕ್ಕಳು. ಅವರೆಂದರೆ ಗುಳ್ಳಪ್ಪ, ಕದಿರಪ್ಪ, ಕುರೇಶಪ್ಪ ಮತ್ತು ಮುನಯ್ಯ. ಮುನಯ್ಯ ಮಾತ್ರ ಬದುಕಿದ್ದಾರೆ ಉಳಿದವರೆಲ್ಲರೂ ಮರಣ ಹೊಂದಿರುತ್ತಾರೆ. ಗುಳ್ಳಪ್ಪ ಸುಮಾರು 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಾನು ಈ ದಾವೆ ಸುಮಾರು 16 ವರ್ಷಗಳ ಹಿಂದೆ ಹಾಕಿರುತ್ತೇನೆ. ಈ ದಾವೆ ಹಾಕುವ ಕಾಲಕ್ಕೆ ಗುಳ್ಳಪ್ಪ ಬದುಕಿದ್ದರು. ಗುಳ್ಳಪ್ಪನಿಗೆ 4 ಜನ ಮಕ್ಕಳು. ಗುಳ್ಳಪ್ಪನ ಮಕ್ಕಳನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ನಿಪಿ-1 ವಂಶವೃಕ್ಷದಲ್ಲಿಯೂ ಸಹ ಗುಳ್ಳಪ್ಪನ ಮಕ್ಕಳು ಇರುವ ಬಗ್ಗೆ ತೋರಿಸಿಲ್ಲ ಎಂದರೆ ನಿಜ. ಗುಳ್ಳಪ್ಪನ ಮಕ್ಕಳನ್ನು ಪಾರ್ಟಿ ಮಾಡಲು ತೊಂದರೆ ಇತ್ತ ಎನ್ನುವ ಪ್ರಶ್ನೆಗೆ ಸಾಕ್ಷಿಯು  ಗುಳ್ಳಪ್ಪನ ಹೆಂಡತಿ ನಾನೆ ಎಲ್ಲಾ ನೋಡಿಕೊಳ್ಳುತ್ತಿದ್ದೇನೆ ಮಕ್ಕಳ ಅವಶ್ಯಕತೆ ಇಲ್ಲ ಎಂದು ಹೇಳಿದ ಕಾರಣ ಮಾಡಿಲ್ಲ ಎಂದು ಹೇಳುತ್ತಾರೆ. ಗುಳ್ಳಪ್ಪನ ಹೆಂಡತಿ ಅಂದರೆ 2 ನೇ ಪ್ರತಿವಾದಿಯು ಮರಣ ಹೊಂದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಕಾಲಾವಕಾಶ ಕೋರಿದ್ದರಿಂದ ಪಾಟಿ ಸವಾಲು ಮುಂದೂಡಲಾಯಿತು.)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸಕೋಟೆ.**